**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

O.S. No.1430/2025
DW: 1

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 17.03.2026**

**ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿಗಳ ಪರ ವಕೀಲರಾದ: ಶ್ರೀಮತಿ ಜಿ.ಎಂ.ಟಿ ರವರಿಂದ**

ನಾನು ಈ ದಿನ ದಾಖಲಾತಿಗಳನ್ನು ಹಾಜರು ಪಡಿಸುತ್ತಿದ್ದು ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕೆಂದು ವಿನಂತಿ ಇರುತ್ತದೆ.

| ಕ್ರಮ ಸಂಖ್ಯೆ | ನಿಶಾನೆ ಸಂಖ್ಯೆ | ದಾಖಲಾತಿ ವಿವರ |
|---|---|---|
| 1 | ನಿ.ಡಿ 03 | ದಿನಾಂಕ 26.09.2014 ರ ಕ್ರಯಪತ್ರದ ಧೃಡಿಕೃತ ಪ್ರತಿ |
| 2 | ನಿ.ಡಿ 04 | ದಿನಾಂಕ 24.03.2015 ರಂದು ಬಿಬಿಎಂಪಿ ರವರು ನೀಡಿರುವ ಉತ್ತರ ಪತ್ರದ ಧೃಡಿಕೃತ ಪ್ರತಿ |
| 3 | ನಿ.ಡಿ 05 | ದಿನಾಂಕ 24.03.2015 ರಂದು ಬಿಬಿಎಂಪಿ ರವರು ನೀಡಿರುವ ಉತ್ತರ ಪತ್ರದ ಧೃಡಿಕೃತ ಪ್ರತಿ |
| 4 | ನಿ.ಡಿ 06 | ದಿನಾಂಕ 22.07.2014 ರಂದು ಬಿಬಿಎಂಪಿ ರವರು ನೀಡಿರುವ ಪ್ರಮಾಣ ಪತ್ರದ ಧೃಡಿಕೃತ ಪ್ರತಿ |
| 5 | ನಿ.ಡಿ 07 | ದಿನಾಂಕ 22.07.2014 ರಂದು ಬಿಬಿಎಂಪಿ ರವರು ನೀಡಿರುವ ಪ್ರಮಾಣ ಪತ್ರದ ಧೃಡಿಕೃತ ಪ್ರತಿ |
| 6 | ನಿ.ಡಿ 08 | ದಿನಾಂಕ 24.03.2015 ರಂದು ಬಿಬಿಎಂಪಿ ರವರು ನೀಡಿರುವ ಪ್ರಮಾಣ ಪತ್ರದ ಧೃಡಿಕೃತ ಪ್ರತಿ |
| 7 | ನಿ.ಡಿ 09 | ದಿನಾಂಕ 24.03.2015 ರಂದು ಬಿಬಿಎಂಪಿ ರವರು ನೀಡಿರುವ ಪ್ರಮಾಣ ಪತ್ರದ ಧೃಡಿಕೃತ ಪ್ರತಿ |
| 8 | ನಿ.ಡಿ 10 | ಸನ್ 2014-2015 ನೇ ಸಾಲಿನ ಹಾಗೂ 2015-2016 ನೇ ಸಾಲಿನ ಕ್ರಮವಾಗಿ ನಾಲ್ಕು ಕಂದಾಯ ದಾಖಲಾತಿ ಪುಸ್ತಕಗಳು |
| 9 | ನಿ.ಡಿ 11 | ನಾಲ್ಕು ಆಸ್ತಿ ತೆರಿಗೆ ರಶೀದಿಗಳು |
| 10 | ನಿ.ಡಿ 12 | ಅಸಲು ದಾವಾ ಸಂಖ್ಯೆ 1117/2016 ರಲ್ಲಿ ಹೊರಡಿಸಿರುವ ತೀರ್ಪು ಹಾಗೂ ಡಿಕ್ರಿಯ ಧೃಡಿಕೃತ ಪ್ರತಿ |

ದಾವೆಯನ್ನು ವಜಾಗೊಳಿಸಬೇಕಾಗಿ ವಿನಂತಿ ಇರುತ್ತದೆ.

**ಪಾಟೀ ಸವಾಲುಃ ವಾದಿ ಪರ ವಕೀಲರಾದ: ಶ್ರೀ ಕೆ.ಎಸ್.ಆರ್ ರವರಿಂದ**

1. ಅಸಲು ದಾವಾ ಸಂಖ್ಯೆ 257/2025 ರಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ನಮ್ಮ ಊರಿನವರು ಆಗಿರುತ್ತಾರೆ. ಸದರಿ ಪ್ರತಿವಾದಿಗಳು ಈ ದಾವೆಗೆ ಸಂಬಂಧಿಸಿರುವುದಿಲ್ಲ ಆದರೆ ಅವರು ನಮ್ಮೊಂದಿಗೆ ಬಂದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಮೊದಲಿಗೆ ಮನೆ ಇತ್ತು ಗಲಾಟೆ ಯಾದ ನಂತರ ಮನೆಯನ್ನು ಒಡೆದು ಹಾಕಿರುತ್ತಾರೆ. ಮನೆಯನ್ನು ಒಡೆದು ಹಾಕಿದ ಬಗ್ಗೆ ಪೋಲೀಸರಿಗೆ ದೂರನ್ನು ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಮನೆ ಇರಲಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯು ವಾಸಕ್ಕೆ ಯೋಗ್ಯವಾದ ಮನೆಯಾಗಿತ್ತು. ಸದರಿ ಮನೆಯಲ್ಲಿ ರಾಯಪ್ಪ ಎನ್ನುವವರು ವಾಸವಾಗಿದ್ದರು. ನಂತರ ನಮಗೆ ನೀಡಿರುತ್ತಾರೆ. ಸದರಿ ಮನೆಯಲ್ಲಿ ನಾವು ವಾಸಕ್ಕೆ ಹೋಗುವ ಪೂರ್ವದಲ್ಲಿಯೇ ಗಲಾಟೆ ಮಾಡಿ ಮನೆಯನ್ನು ಒಡೆದು ಹಾಕಿರುತ್ತಾರೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದು 15 ದಿನಗಳ ನಂತರ ನಾವು ವಾಸಕ್ಕೆ ಹೋಗಲು ಪ್ರಯತ್ನ ಪಟ್ಟಾಗ ಗಲಾಟೆಯಾಗಿರುತ್ತದೆ. ಸದರಿ ಮನೆಗೆ ವಿದ್ಯುತ್ ಸಂಪರ್ಕ ಇತ್ತು. ಆದರೆ ವಿದ್ಯುತ್ ಸಂಪರ್ಕ ಕುರಿತಂತೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ.

2. ಈ ದಾವೆಯಲ್ಲಿ 3 ದಾವಾ ಸ್ವತ್ತುಗಳು ಇರುತ್ತವೆ. ದಾವಾ ಸ್ವತ್ತುಗಳ ವಿಸ್ತೀರ್ಣವನ್ನು ಹಾಗೂ ಚೆಕ್ಕುಬಂದಿಯನ್ನು ನನಗೆ ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳನ್ನು ನಾನು ರಾಯಪ್ಪರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿಯವರಿಗೆ ದಾವಾ ಸ್ವತ್ತುಗಳು ಅವರ ಪೂರ್ವಜರಿಂದ ಬಂದಿರುತ್ತವೆ ಎಂದು ದಾಖಲಾತಿಗಳನ್ನು ಪಡೆದಿರುತ್ತೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ಮಾರಾಟಗಾರರಿಗೆ ಸಂಬಂಧಿಸಿರುವುದಿಲ್ಲ ಹಾಗೂ ಅವರಿಗೆ ಯಾವುದೇ ಮಾರಾಟದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಾಯಪ್ಪರವರ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ರಾಯಪ್ಪರವರ ತಂದೆ ಹೆಸರು ವೆಂಕಟಸುಬ್ಬಯ್ಯ ಎಂದರೆ ಸರಿ. ಸದರಿ ವೆಂಕಟಸುಬ್ಬಯ್ಯ ರವರಿಗೆ ರಾಯಪ್ಪ ಹಾಗೂ ಗೋಪಾಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ದಾವಾ ಸ್ವತ್ತಿನ ಕುರಿತಂತೆ ವೆಂಕಟಸುಬ್ಬಯ್ಯ ನವರ ಮಕ್ಕಳ ಮಧ್ಯ ವಿಭಾಗವಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿಯವರಿಗೆ ದಾವಾ ಸ್ವತ್ತುಗಳನ್ನು ಹೊರುತುಪಡಿಸಿ ಬೇರೆ ಸ್ವತ್ತುಗಳು ಇರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಆದರೆ ಸ್ವತುಗಳ ವಿವರಗಳು ಗೊತ್ತಿರುವುದಿಲ್ಲ.

3. ರಾಯಪ್ಪ ಈ ಮೊದಲು ವಾದಿಯ ವಿರುದ್ಧ ಅಸಲು ದಾವಾ ಸಂಖ್ಯೆ 570/2007 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯು ಅರ್ಹತೆ ಮೇಲೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಜಾ ಆದೇಶದ ವಿರುದ್ಧ ರಾಯಪ್ಪ ರವರು ಆರ್.ಎ.ಸಂಖ್ಯೆ 264/2012 ಎಂಬ ಮೇಲ್ಮನವಿಯನ್ನು ಸಲ್ಲಿಸಿದ್ದರು ಹಾಗೂ ಸದರಿ ಮೇಲ್ಮನವಿಯು ಸಹಾ ಅರ್ಹತೆ ಮೇಲೆ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ತನ್ನ ವಾದಪತ್ರದಲ್ಲಿ ಈ ಮೇಲೆ ಹೇಳಿದ್ದ ದಾವೆ ಕುರಿತಾಗಿ ನಮೂದಿಸಿದ್ದರೂ ಸಹಾ ನಾನು ದಾವೆ ಕುರಿತಾಗಿ ನಮ್ಮ ವಕೀಲರ ಮೂಲಕ ಮಾಹಿತಿ ಪಡೆದಿರುವುದಿಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತುಗಳು ರಾಯಪ್ಪರವರಿಗೆ ಸೇರಿರುವುದಿಲ್ಲ ಎಂದು ವಜಾ ಮಾಡಿದ್ದರೂ ಸಹಾ ನನಗೆ ಮೋಸ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ರಾಯಪ್ಪರವರ ವಿರುದ್ಧ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ.

4. ದಾವಾ ಸ್ವತ್ತುಗಳು ವಾದಿಗೆ ಸೇರಿದ್ದು ಹಾಗೂ ಅವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಶ್ರೀಮತಿ. ಪ್ರಮೀಳ ನನಗೆ ಪರಿಚಯ ಇರುತ್ತಾರೆ. ಸದರಿಯವರ ವಿರುದ್ಧ ನಾನು ಅಸಲು ದಾವಾ ಸಂಖ್ಯೆ 1117/2016 ಎಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಏಕಪಕ್ಷಿಯವಾಗಿ ಆದೇಶವಾಗಿರುತ್ತದೆ. ನಾನು ಸದರಿ ದಾವೆಯಲ್ಲಿ ಶ್ರೀಮತಿ. ಪ್ರಮೀಳ ರವರಿಗೆ ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಸಮನ್ಸ್ ಜಾರಿಗೊಳಿಸದೇ ಏಕಪಕ್ಷಿಯವಾಗಿ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದಿ ಸಹಾ ನನಗೆ ತಕರಾರು ಮಾಡಿರುತ್ತಾನೆ. ಸದರಿ ದಾವೆಯನ್ನು ನಾನು ವಾದಿ ವಿರುದ್ಧ ಸಹಾ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ.

5. ರಾಯಪ್ಪರವರು ವಾದಿಯು ಸಲ್ಲಿಸಿರುವ ದಾವೆಗಳ ಕುರಿತಂತೆ ನಾನು ನೋಡಿ ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿಯ ಹಾಗೂ ನನ್ನ ಸ್ವತ್ತು ಬೇರೆ ಬೇರೆಯಾಗಿರುತ್ತದೆ. ವಾದಿಯ ಸ್ವತ್ತು ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ರಾಯಪ್ಪರವರು ವಾದಿಯ ವಿರುದ್ಧ ಸಲ್ಲಿಸಿದ್ದ ಅಸಲು ದಾವಾ ಸಂಖ್ಯೆ 570/2007 ರಲ್ಲಿನ ದಾವಾ ಸ್ವತ್ತನ್ನು ನಾನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಹಂಚಿನ ಮನೆ ಇತ್ತು. ಸದರಿ ಮನೆಯು ಸುಮಾರು 5 ಚದುರ ಅಡಿ ಅಗಲವಿತ್ತು. ನಮ್ಮ ಕ್ರಯಪತ್ರದಲ್ಲಿ ಮನೆಯ ವಿಸ್ತೀರ್ಣವನ್ನು 675 ಚದುರ ಅಡಿ ಇತ್ತು ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 257/2025 ರಲ್ಲಿ ಎರಡು ದಾವಾ ಸ್ವತ್ತುಗಳು ಇರುತ್ತವೆ. ಸದರಿ ದಾವಾ ಸ್ವತ್ತುಗಳ ಮಧ್ಯದಲ್ಲಿ ಹಂಚಿನ ಮನೆ ಇತ್ತು. ವಾದಪತ್ರದಲ್ಲಿ ಮನೆಯ ವಿಸ್ತೀರ್ಣವನ್ನು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

ವಾದಪತ್ರದಲ್ಲಿ 300 ಚದುರ ಅಡಿ ಎಸಿಸಿ ಶೀಟಿನ ಮನೆ ಇರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಮನೆಯನ್ನು ನಮ್ಮ ಮಾರಾಟಗಾರರೇ ನಿರ್ಮಾಣ ಮಾಡಿದ್ದರು. ದಾವಾ ಸ್ವತ್ತುಗಳು ನಮಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**